ಟಿ.ಪಿ. ಅಶೋಕ



# ವಿಮರ್ಶೆ: ವಿಮರ್ಶಕನ ವ್ಯಕ್ತಿತ್ವದ ಅಭಿವ್ಯಕ್ತಿ

1 ತಮ್ಮ ಕೃತಿಗಳಿಗೆ ವಿಮರ್ಶೆ ಬರುತ್ತಿಲ್ಲ ಎಂದು ಸಾಮಾನ್ಯವಾಗಿ ಹೆಚ್ಚಿನ ಲೇಖಕರು ದೂರುವುದನ್ನು ನಾನು ಗಮನಿಸಿದ್ದೇನೆ. ಇವರಲ್ಲಿ ಯುವ ಲೇಖಕರು, ಹಿರಿಯ ಲೇಖಕರು, ಉದಯೋನ್ಮುಖ ಲೇಖಕರು ಎಲ್ಲರೂ ಸೇರುತ್ತಾರೆ. ವಿಮರ್ಶೆಯ, ಪ್ರಶಸ್ತಿಯ ಗೌರವಗಳನ್ನು ಪಡೆದುಕೊಂಡ ಹಲವು ಪ್ರಸಿದ್ಧ ಲೇಖಕರಲ್ಲೂ ಇಂಥ ಗೊಣಗಾಟವನ್ನು ನಾನು ಕೇಳಿದ್ದೇನೆ. ಇದಕ್ಕೆ ಅಪವಾದಗಳು ಇಲ್ಲವೆಂದಲ್ಲ. ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿ, ಕೆ.ವಿ. ಸುಬ್ಬಣ್ಣರಂಥ ಲೇಖಕರಲ್ಲಿ ತಮ್ಮ ಕೃತಿಗಳ ಬಗ್ಗೆ ವಿಮರ್ಶೆ ಮತ್ತು ಪ್ರಶಸ್ತಿಗಳ ಬಗ್ಗೆ ಒಂದು ಬಗೆಯ ದಿವ್ಯ ನಿರ್ಲಕ್ಷ್ಯ, ನಿರ್ಲಿಪ್ತತೆಗಳು ಇದ್ದುವೆಂಬುದನ್ನೂ ತುಂಬಾ ಹತ್ತಿರದಿಂದ ನಾನು ಬಲ್ಲೆ. ಆದರೆ ಹೆಚ್ಚಿನ ಲೇಖಕರಲ್ಲಿ ಈ ಬಗ್ಗೆ ಅತೃಪ್ತಿ, ಸಿಟ್ಟು, ಹತಾಶೆಗಳಿರುವುದು ನನ್ನ ಅನುಭವಕ್ಕೆ ಬಂದಿದೆ. ಅಷ್ಟೇ ಅಲ್ಲ, ವಿಮರ್ಶೆಗಳು ಬಂದಾಗಲೂ ತಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಬಂದಿಲ್ಲ, ಬರಬೇಕಾದ ಕಾಲದಲ್ಲಿ ಬಂದಿಲ್ಲ ಎನ್ನುವವರನ್ನೂ ನಾನು ಕಂಡಿದ್ದೇನೆ. ತಮ್ಮ ಕೃತಿಗಳ ಬಗ್ಗೆ ಸರಿಯಾದ ವಿಮರ್ಶೆ ಬಂದಿಲ್ಲ, ವಿಮರ್ಶೆ ಮಾಡಿದವರಿಗೆ ತಮ್ಮ ಕೃತಿಗಳು ಅರ್ಥವೇ ಆಗಿಲ್ಲ, ತಮ್ಮ ಕೃತಿಗಳಿಗೆ ವಿಮರ್ಶಕರು ನ್ಯಾಯ ಒದಗಿಸಿಲ್ಲ ಎಂಬ ಮಾತುಗಳನ್ನೂ ನಾನು ಹಲವು ದಶಕಗಳಿಂದ ಕೇಳಿಕೊಂಡು ಬಂದಿದ್ದೇನೆ. ವಿಮರ್ಶೆಯ ಬಯಕೆಯು ಅಂತಿಮವಾಗಿ ಹೊಗಳಿಕೆಯ ಮತ್ತು ಪ್ರಶಸ್ತಿಯ ಬಯಕೆಗಳಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆಯೂ ಸಾಮಾನ್ಯವಾಗಿದೆ.

2 ಮೊದಮೊದಲು, ಪತ್ರಿಕೆಗಳಿಗೆ ಬುಕ್ ರಿವ್ಯೂಗಳನ್ನು ಬರೆಯಲು ಪ್ರಾರಂಭಿಸಿದಾಗ, ಪತ್ರಿಕೆಗಳ ಸಂಪಾದಕರು ಕಳಿಸುತ್ತಿದ್ದ ಪುಸ್ತಕಗಳ ಬಗ್ಗೆ ನನ್ನ ಅನಿಸಿಕೆಗಳನ್ನು ಪದಮಿತಿಯಲ್ಲಿ ದಾಖಲಿಸುತ್ತಿದ್ದೆ. ಆ ಪುಸ್ತಕಗಳು ನನ್ನ ಆಯ್ಕೆಯಾಗುತ್ತಿರಲಿಲ್ಲ. ಹಾಗಾಗಿ ನನ್ನ